ಮೇಲೂ ಆಗುತಾನೆ... ನಾನೇ ಅವನಿಗೆ ಡ್ರಾಇಂಗು ಕಲಿಸಿಕೊಡುತೀನಿ...' ಎಂದೆಲ್ಲ ಗಂಡನಿಗೆ ತಿಳಿಹೇಳಿ ಪ್ರೋತ್ಸಾಹಿಸಿದ್ದಳು. ಪೀಎಚ್ಡಿಯ ಸಲುವಾಗಿ ವಿಲಾಯಿತಿಗೆ ಹೊರಡುವಾಗಲೂ, ನನಗೂ ಹೆಚ್ಚು ಸಂಭ್ರಮಿಸಿದ್ದು ಅವಳೇ. 'ಡೂ ವೆಲ್ಲ್, ಸಿದ್ಧ್... ಅಯಾಮ್ ಸೋ ಸೋ ಪ್ರೌಡ್ ಆಫ್ ಯು. ಯಾರೂ ಮಾಡದ್ದು ಮಾಡೋಕೇ ಹೊರಟಿದ್ದೀ... ಲವ್ಯು ಕಂದ...' ಅಂತಂದು ಏರ್ಪೋರ್ಟಿನಲ್ಲಿ ಬೀಳ್ಕೊಟ್ಟಿದ್ದಳು. ಅವಳನ್ನು ನಾನು ಸಾಕ್ಷಾತ್ ಕಂಡಿದ್ದು ಅದೇ ಕೊನೆ. ಸರಿಯಾಗಿ ಐವತ್ತೆರಡು ತಿಂಗಳುಗಳ ಹಿಂದಿನದೊಂದು ಮಾರ್ಚಿನ ನಡುರಾತ್ರಿಯಲ್ಲಿ. ಈ ನಡುವೆ ಸ್ಕೈಪಿನಲ್ಲಿ ಆಗಿಂದಾಗ ನಮ್ಮ ಮುಖಾಮುಖಿಯಿದ್ದಿತಾದರೂ, ಅದು ದೂರಸಂಪರ್ಕವೇ ತಾನೆ? ಭೌತಿಕವಾದ ಟಚ್ಚುಗಿಚ್ಚು ಎಮೋಶನೆಲ್ಲ ನಿರ್ಜೀವ ಮುಲಾಕತುಗಳು ಅಷ್ಟೆ. ಅಸಲಿನಲ್ಲಿ ಅದೊಂದು ನಮೂನೆ ಮಾಯೆ. ವರ್ಚುಅಲೀ ವರ್ಚುಅಲಾದ ಮಿತ್ಥು ಮತ್ತು ಮಿಥ್ಯೆ! ಕೂಡಲೆ, ವಾರದ ಹಿಂದೆ ಸ್ಕೈಪಿಸಿದ್ದು ನೆನಪಾಯಿತು. ಮಾ —ಳ ಹಿಂದುಗಡೆಯಲ್ಲಿ ಹೆಚ್ಚು ಬೆಳಕಿದ್ದಿತಾಗಿ ಅವಳ ಚಹರೆಯ ವಿವರಗಳೇನೂ ಹೆಚ್ಚು ತೋರಿಬರಲಿಲ್ಲ. ಮೊಟುಕಾಗಿ ಕೂದಲು ಕತ್ತರಿಸಿಕೊಂಡಿದ್ದಾಳನ್ನಿಸಿತು. ಅಲ್ಲದೆ ತಲೆಯಲ್ಲೆಲ್ಲ ಅರೆನರೆತ ಸಾಲ್ಟ್‌ಪೆಪ್ಪರಿನಂತಹ ಮೋಟುಗೂದಲು. ಕತ್ತರಿಸಿದ್ದನ್ನುವುದಕ್ಕಿಂತ ಹೆರೆದಿದ್ದನ್ನುವುದೇ ಹೆಚ್ಚು ಸರಿ.

'...ಸಾಲದುದಕ್ಕೆ ಹದಿನೈದು ದಿನಕ್ಕೆ ಮೊದಲು ಹತ್ತಾ ತಲೆ ಹೆರೆಸಿಕೊಂಡು ಬೇರೆ ಬಂದಿದ್ದಾಳೆ. ಥೇಟು ಸಾಧ್ವಿಯ ಹಾಗೆ ಕಾಣಿಸುತಾಳೆ...' ಪಾ ಮಾತು ಮುಂದುವರೆಸಿ, ನನಗನಿಸಿದ್ದನ್ನೇ ಆಡಿದ. ಫಜೀತಿಯೋ ಮೊದಲಾಯಿತು. 'ಸರಿ... ಅವಳಿರೋ ಹಾಗೇ ಒಪ್ಪಿಕೊಂಡು ಬೀಡೋಣ ಅಂತಂದರೆ —ಈ ಇಡೀ ಜಗತ್ತಿನಲ್ಲಿ ನನಗೆ

